# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 924
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 18-12-2018

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ 2001ರಲ್ಲಿ ಸ್ಥಾಪನೆಯಾದಾಗ ಸಂಸ್ಥೆ ಲಾಭ/ನಷ್ಟರಹಿತ (ಬ್ರೇಕ್-ಈವನ್) ತಲುಪುವವರೆಗೆ ಸಂಸ್ಥೆಯಿಂದ ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆಯನ್ನು (ಎಂವಿ-ಟ್ಯಾಕ್ಸ್) ಸಂಸ್ಥೆಯಲ್ಲಿ ಉಳಿಸಿಕೊಳ್ಳಲು ಸರ್ಕಾರಿ ಆದೇಶ ಹೊರಡಿಸಿ ಸೌಲಭ್ಯ ಕಲ್ಪಿಸಿರುವುದು ನಿಜವೇ; (ವಿವರವಾದ ಮಾಹಿತಿ ನೀಡುವುದು)</td><td>ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ 2000ನೇ ಸಾಲಿನಲ್ಲಿ ಬೇರ್ಪಟ್ಟು ಸ್ವತಂತ್ರವಾಗಿ ಸ್ಥಾಪನೆಗೊಂಡ ಸಂದರ್ಭದಲ್ಲಿ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಈ ಭಾಗದಲ್ಲಿನ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಒದಗಿಸಲು ಅನುಕೂಲವಾಗುವಂತೆ ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆಯ (MV Tax) ಮೊತ್ತವನ್ನು ಸಂಸ್ಥೆಯು ಅನುಭವಿಸುವ ನಗದು ನಷ್ಟಕ್ಕೆ ಸಮನಾಗಿ ಅಥವಾ ಸಂಸ್ಥೆ ಲಾಭ-ನಷ್ಟರಹಿತ (Break-even) ಸ್ಥಿತಿ ತಲುಪುವವರೆಗೆ ಸಂಸ್ಥೆಯಲ್ಲಿ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಿ ದಿನಾಂಕ: 20.3.2001 ರಂದು ಆದೇಶ ಹೊರಡಿಸಲಾಗಿದೆ.<br><br>ಮುಂದುವರೆದು, ಈ.ಕ.ರ.ಸಾ.ಸಂಸ್ಥೆಯು ಲಾಭ/ನಷ್ಟರಹಿತ ತಲುಪುವವರೆಗೆ ಮೋಟಾರು ವಾಹನ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದೆ ಸಂಸ್ಥೆಯಲ್ಲಿ ಉಳಿಸಿಕೊಳ್ಳಲು ಕಲ್ಪಿಸಲಾಗಿದ್ದ ಅವಕಾಶವನ್ನು ಮುಂದಿನ 5 ವರ್ಷಗಳ ಅವಧಿಗೆ ಮುಂದುವರೆಸಿ ದಿನಾಂಕ: 06.11.2012 ರಂದು ಆದೇಶಿಸಲಾಗಿದೆ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯು ಕಳೆದ 5 ವರ್ಷಗಳಿಂದ ಇಲ್ಲಿಯವರೆಗೆ ಕಡಿತಗೊಳಿಸಿದ ಮೋಟಾರು ವಾಹನಗಳ ತೆರಿಗೆ ಮೊತ್ತವೆಷ್ಟು? (ವಿವರ ನೀಡುವುದು)</td><td>ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯು ಕಳೆದ 5 ವರ್ಷಗಳಿಂದ ಇಲ್ಲಿಯವರೆಗೆ ಕಡಿತಗೊಳಿಸಿದ ಮೋಟಾರು ವಾಹನದ ತೆರಿಗೆ ಮೊತ್ತದ ವಿವರ ಈ ಕೆಳಗಿನಂತಿದೆ.<br><br><table><tr><th>ವರ್ಷ</th><th>ಕಡಿತಗೊಳಿಸಿದ ಮೊತ್ತ (ರೂ.ಕೋಟಿಗಳಲ್ಲಿ)</th></tr><tr><td>2013-14</td><td>12.95</td></tr><tr><td>2014-15</td><td>77.00</td></tr><tr><td>2015-16</td><td>60.66</td></tr><tr><td>2016-17</td><td>43.62</td></tr><tr><td>2017-18</td><td>22.80</td></tr><tr><td>ಒಟ್ಟು</td><td>217.03</td></tr></table></td></tr>
<tr><td>ಇ)</td><td>ಸಂಸ್ಥೆಯು ಇಲ್ಲಿಯವರೆಗೆ ಗಳಿಸಿರುವ ಲಾಭ ಹಾಗೂ ನಷ್ಟದ ವಿವರ ನೀಡುವುದು:</td><td>ಈ.ಕ.ರ.ಸಾ ಸಂಸ್ಥೆಯು ಪ್ರಾರಂಭದಿಂದಲೂ ನಷ್ಟವನ್ನು ಅನುಭವಿಸುತ್ತಿದ್ದು, 2017-18ರ ವರೆಗೆ ಕ್ರಮಿಕ ರೂ.608.63 ಕೋಟಿ ನಷ್ಟವಾಗಿದೆ. ವರ್ಷವಾರು ಅನುಭವಿಸಿದ ನಷ್ಟದ ವಿವರ ಅನುಬಂಧ ದಲ್ಲಿ ನೀಡಲಾಗಿದೆ.</td></tr>
<tr><td>ಈ)</td><td>ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿರುವ 2001ನೇ ಸಾಲಿನ ಸರ್ಕಾರಿ ಆದೇಶವನ್ನು ಮುಂದುವರೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.</td></tr>
</table>

ಸಾರಿಇ 167 ಸಾಸಂಪ್ರ 2018

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

# ಅನುಬಂಧ

**::ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ : ಕಲಬುರಗಿ::**

**ವಿಧಾನ ಪರಿಷತ್ತ್ ಪ್ರಶ್ನೆ ಸಂಖ್ಯೆ: 924**

ಈ.ಕ.ರ.ಸಾ.ಸಂಸ್ಥೆಯು ಪ್ರಾರಂಭದಿಂದಲೂ ನಷ್ಟ ಅನುಭವಿಸುತ್ತಿದ್ದು, ವರ್ಷವಾರು ಅನುಭವಿಸಿದ ನಷ್ಟದ ವಿವರ ಈ ಕೆಳಗಿನಂತಿದೆ.

| ವರ್ಷ | ನಷ್ಟ (ರೂ ಕೋಟಿಯಲ್ಲಿ) |
|---|---|
| ಪ್ರಾರಂಭಿಕ ಶಿಲ್ಕು (ಕ.ರಾ.ರ.ಸಾ. ಸಂಸ್ಥೆಯಿಂದ ವರ್ಗಾವಣೆಯಾದ ನಷ್ಟ) | 83.50 |
| 2000-01 | 21.18 |
| 2001-02 | 18.18 |
| 2002-03 | 14.98 |
| 2003-04 | 12.90 |
| 2004-05 | 40.31 |
| 2005-06 | 27.79 |
| 2006-07 | 29.53 |
| 2007-08 | 15.96 |
| 2008-09 | 28.65 |
| 2009-10 | 33.86 |
| 2009-10 ನೇ ಸಾಲಿನಲ್ಲಿ ಬಿಜಾಪೂರ ವಿಭಾಗವು ಈ.ಕ.ರ.ಸಾ ಸಂಸ್ಥೆಗೆ ವಿಲೀನಗೊಂಡಾಗ ವರ್ಗಾವಣೆಯಾದ ನಷ್ಟ | 66.22 |
| 2010-11 | 12.05 |
| 2011-12 | 18.07 |
| 2012-13 | 20.92 |
| 2013-14 | 39.72 |
| 2014-15 | 15.12 |
| 2015-16 | 21.92 |
| 2016-17 | 54.46 |
| 2017-18 | 33.31 |
| ಒಟ್ಟು | 608.63 |